# ಪ್ರಾಣನಾಥ ಪಾಲಿಸೋ ನೀ ಎನ್ನ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 383.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 150.
3. **Note:** Lyrics in both the references above are same. And the singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
5. **Note:** Lyrics in both the references above are same. And the singer has followed these wordings.

ರಾಗ: ನಾಟಕುರಂಜಿ ತಾಳ: ಆದಿ

ಪ್ರಾಣನಾಥ ಪಾಲಿಸೋ ನೀ ಎನ್ನ || ಪ ||
ಜಾಣ ಲಕ್ಷ್ಮಣಗೆ ಜೀವವಿತ್ತ ಘನ್ನ || ಅಪ ||

ವಾಣಿಪತಿ ಸಮನಾದವನೆ
ರಾಣಿ ಭಾರತಿ ರಮಣನೆ || 1 ||

ಅಂಜನಾದೇವಿಯ ಆತ್ಮಜನೆ
ಕಂಜಾಕ್ಷ ರಾಮನ ದೂತನೆ || 2 ||

ಪಾಂಡುಸುತ ಭೂಮಂಡಲೇಶ
ಪಾಂಡುರಂಗನ ಭಕ್ತರ ಪೋಷ || 3 ||

ಮೂಲ ಗುರು ಮಧ್ವ ರಾಯರಾಗಿ
ಮೂಲ ದೈತ್ಯರ ನೀಗಿ || 4 ||

ನರಹರಿ ಪುರಂದರ ವಿಠಲನ ಕೀರ್ತಿ
ನರರಿಗೆ ತೋರಿದ ನಿಜ ಗುರುಮೂರ್ತಿ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪ್ರಾಣನಾಥ** – ಪ್ರಾಣವೇ ಮೊದಲಾದ ಐದು ಮುಖ್ಯವಾದ ಪ್ರಾಣಗಳಿಗೂ ಧನಂಜಯವೇ ಮೊದಲಾದ ಐದು ಅಮುಖ್ಯ ಪ್ರಾನಿಗಳಿಗೂ ಅಂತರ್ಯಾಮಿಯಾಗಿ ನಿಯಾಮಕನಾಗಿರುವವನು.

**ಜಾಣ ಲಕ್ಷ್ಮಣನಿಗೆ...** – ಯುದ್ಧದಲ್ಲಿ ಮೂರ್ಛೆಗೊಂಡ ಲಕ್ಷ್ಮಣನನ್ನು ಬದುಕಿಸಲು ಸಂಜೀವಿನಿಯನ್ನು ಹೊತ್ತು ತಂದವನು.

**ವಾಣೀಪತಿ ಸಮನಾದವನೆ** – ಬ್ರಹ್ಮನ ಸಮಕಕ್ಷಯಲ್ಲೇ (ಮೂರನೆಯದು) ಇರುವವನು.

**ಪಾಂಡುಸುತ** – ಭೀಮ.

**ಪಾಂಡುರಂಗಭಕ್ತರ ಪೋಷ** – ಹರಿಭಕ್ತರನ್ನು ಸಲಹುವವನು.

**ನರಹರಿ ಪುರಂದರವಿಠಲನ ಕೀರ್ತಿ ನರರಿಗೆ ತೋರಿದ** – ಹರಿಯು ಸರ್ವೋತ್ತಮನೆಂಬುದನ್ನು ಜನರಿಗೆ ತಿಳಿಯಹೇಳಿದವನು (ಮಧ್ವಾಚಾರ್ಯರಾಗಿ).

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** hanuma, hanuma-bhima-madhwa, bhima, madhva, rama, madhwacharya, Lakshmana, jiva, Bharati, pandu, asura, nara, Narasimha,
**Pravachana:** NA
**Explanation:** NA